**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ:712/2023**

**ಸಾಕ್ಷಿಯನ್ನು ದಿಃ 25.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಚಿಕ್ಕಸ್ವಾಮಿ | ಸಿಡಬ್ಲ್ಯೂ:2 | ಪಿಡಬ್ಲ್ಯೂ:2 |
| ತಂದೆಯ ಹೆಸರು | ಚಿಕ್ಕನಾಯಕ | | |
| ವಯಸ್ಸು | 34 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸಸ್ಥಳ | ಅಂದನಹಳ್ಳಿ ಗ್ರಾಮ,<br>ಹುಣಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಮೃತ ಚಾಮನಾಯಕ ನಮ್ಮ ಊರಿನವರೆ ಅವರು ನಮಗೆ ಗೊತ್ತು. ಅವರು ಅಪಘಾತದಲ್ಲಿ ದಿಃ 05.08.2023 ರಂದು ತೀರಿಕೊಂಡಿರುತ್ತಾರೆ. ಮೃತ ಚಾಮನಾಯಕ ಟಿ.ವಿ.ಎಸ್ ಗಾಡಿಯಲ್ಲಿ ಬಿಳಿಕೆರೆಯಿಂದ ಅಂದನಹಳ್ಳಿ ಗ್ರಾಮಕ್ಕೆ ಹೋಗುವುದಕ್ಕಾಗಿ ರಸ್ತೆ ಪಕ್ಕದಲ್ಲಿ ನಿಂತಿದ್ದರು. ಹುಣಸೂರು ಕಡೆಯಿಂದ ಗೂಡ್ಸ್ ಗಾಡಿಯೊಂದು ವೇಗವಾಗಿ ಬಂದು ಹಿಂದಿನಿಂದ ಚಾಮನಾಯಕ ರವರ ಟಿ.ವಿ.ಎಸ್ ಗಾಡಿಗೆ ಡಿಕ್ಕಿ ಪಡಿಸಿತು. ನಾನು ಆ ಸಮಯದಲ್ಲಿ ನಾನು ಊರಿಗೆ ಹೋಗಬೇಕೆಂದು ನನ್ನ ಗಾಡಿಯಿಂದ ಇಳಿದು ಪುಟ್ ಪಾತ್ ನಲ್ಲಿ ನಿಂತಿದ್ದೆ. ಹಾಗೆ ಡಿಕ್ಕಿ ಪಡಿಸಿದಾಗ ಚಾಮನಾಯಕರು ಅವರ ಗಾಡಿಯಿಂದ ಬಿದ್ದು ಹೋದರು, ಆಗ ನಾನು ಮತ್ತು ಅಲ್ಲಿ ಇದ್ದ 3-4 ಜನ ಸೇರಿ ಉಪಚರಿಸಿ ಅಂಬ್ಯೂಲೆನ್ಸನಲ್ಲಿ ಆಸ್ಪತ್ರೆಗೆ ಕಳಿಸಿದೇವು. ಅವರಿಗೆ ತಲೆಗೆ,

ಮಂಡಿ, ಮೈಕೈಗೆ ಗಾಯವಾಗಿ ನೋವಾಗಿದ್ದವು. ಸದರಿ ವಿಚಾರವನ್ನು ಅವರ ಮಗ ಚಾಸಾ 1 ರವರಿಗೆ ಪೋನ್ ಮಾಡಿ ತಿಳಿಸಿರುತ್ತೇನೆ. ಮೊದಲು ಕೆ.ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿಂದ ಜೆ.ಎಸ್.ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ತಿಳಿಯಿತು. ಗೂಡ್ಸ್ ಆಟೋ ಚಾಲಕ ಮತ್ತು ಅವರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಆಟೋ ಚಾಲಕ ನ್ಯಾಯಾಲಯದ ಮುಂದೆ ಇದ್ದು ಅವರನ್ನು ನೋಡಿ ಗುರುತಿಸಿರುತ್ತಾರೆ. ಅವರ ಹೆಸರು ಲೊಕೇಶ್ ಎಂದು ಗೊತ್ತಾಯಿತು.

ದಿಃ 06.08.2023 ರಂದು ಪೊಲೀಸರು ಸ್ಥಳ ಮಹಜರ್ ಮಾಡಲು ಪೋನ್ ಮಾಡಿದ್ದು, ಆ ಸಮಯದಲ್ಲಿ ನಾನು ಹಾಜರಿದ್ದು ಸ್ಥಳವನ್ನು ತೋರಿಸಿರುತ್ತೇನೆ. ಆ ಸಮಯದಲ್ಲಿ ನಾನು, ಚಾಸಾ 3 ಮತ್ತು 4 ರವರು ಹಾಜರಿದ್ದರು. ಮಹಜರ್ ಅನ್ನು 3 ರಿಂದ 3.45 ಗಂಟೆವರೆಗೆ ಮಾಡಿರುತ್ತಾರೆ. ನಂತರ ಪೋಟೊವನ್ನು ತೆಗೆದಿರುತ್ತಾರೆ. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಿದ್ದು, ಅವು ಮಹಜರ್ ಮತ್ತು ನಕ್ಷೆಯಾಗಿದ್ದು, ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ, ಅವುಗಳನ್ನು ನಿಪಿ. 3 ಮತ್ತು 4 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ. 3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ಗೂಡ್ಸ್ ಆಟೋ ಮತ್ತು ಟಿ.ವಿ.ಎಸ್ ಗಾಡಿಯನ್ನು ಸ್ಥಳದಲ್ಲಿ ಅಮಾನತ್ತು ಪಡಿಸಿಕೊಂಡರು. ಸದರಿ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. ಗೂಡ್ಸ್ ಆಟೋದ 2 ಪೋಟೊಗಳನ್ನು ಮತ್ತು ಟಿ.ವಿ.ಎಸ್‌ನ 2 ಪೋಟೊಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ. 5 ರಿಂದ 8 ಎಂದು ಗುರುತಿಸಲಾಯಿತು. ಈ ಘಟನೆ ವಿಚಾರವಾಗಿ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಎಸ್.ಎಂ. ವಕೀಲರಿಂದಃ**

ನಾನು ವ್ಯವಸಾಯ ಮಾಡಿಕೊಂಡಿದ್ದೇನೆ. ಅಪಘಾತದ ದಿನ ನಾನು ನಮ್ಮ ಊರಿನಿಂದ ಹುಣಸೂರಿಗೆ ತರಕಾರಿ ಮಾರಾಟ ಮಾಡಲೆಂದು ಬಂದು ವಾಪಸ್ಸು ಹೋಗುತ್ತಿದ್ದೆ. ಹಾಗೆ ಹುಣಸೂರಿಗೆ ನಾನು ಆ ದಿನ ಮಧ್ಯಾಹ್ನನವೇ ಬಂದಿದ್ದೆ. ಅಪಘಾತ 5.30 ರಿಂದ 5.45 ಗಂಟೆಗೆ ಆಗಿರುತ್ತದೆ. 5.30 ರಿಂದ 5.45 ಗಂಟೆಗೆ ಕತ್ತಲಾಗಿತ್ತು ಎಂದರೆ ಸರಿಯಲ್ಲ. ಚಾಮನಾಯಕರವರು ನಮ್ಮ ಊರಿನವರೆ, ಅವರು ಮತ್ತು ನಾವು ಒಂದೆ ಗ್ರಾಮಸ್ಥರು ಎಂದರೆ ಸರಿ. ಚಾಮನಾಯಕರವರು ಹೆಲ್ಮೆಟ್ ಧರಿಸಿದ್ದನ್ನು ನಾನು ನೋಡಿಲ್ಲ. ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿಯಲ್ಲ. ಚಾಮನಾಯಕರವರ ನಿರ್ಲಕ್ಷತನದಿಂದಲೇ ಸದರಿ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅಪಘಾತವಾಯಿತು ಎಂದು ಹೇಳುವ ರಸ್ತೆಯಲ್ಲಿ ಅಂದನಹಳ್ಳಿಗೆ ಗ್ರಾಮಕ್ಕೆ ಹೋಗುವಾಗ ರಸ್ತೆ ದಾಟಲು ಚಿಹ್ನೆ ಇತ್ತಾ ಎಂದರೆ ಇರಲಿಲ್ಲ ಎನ್ನುತ್ತಾರೆ. ಈ ಘಟನೆ ವಿಚಾರವಾಗಿ ನಾನು ಪೊಲೀಸ್ ಠಾಣೆಗೆ ಒಂದು ಬಾರಿ ಹೋಗಿರುತ್ತೇನೆ.

ಸ್ಥಳ ಮಹಜರ್ ಗೆ ಬರಬೇಕೆಂದು ಮುಂಚಿತವಾಗಿ ನನಗೆ ನೋಟೀಸು ಕೊಟ್ಟಿಲ್ಲ, ಅದರೆ ಪೋನ್ ಮೂಲಕ ತಿಳಿಸಿದ್ದರು. ಅಪಘಾತ ಆಯಿತು ಎಂದು ಹೇಳುವ ಸ್ಥಳದ ಪೂರ್ವ ದಿಕ್ಕಿಗೆ ಇಟ್ಟಿಗೆ ಫ್ಯಾಕ್ಟರಿ ಇತ್ತು, ಪಶ್ಚಿಮಕ್ಕೆ ದೇವಸ್ಥಾನ ಇದೆ, ಉತ್ತರ-ದಕ್ಷಿಣಕ್ಕೆ ಏನಿದೆ ಎಂದರೆ ಅದನ್ನು ನಾನು ಗಮನಿಸಿಲ್ಲ ಎನ್ನುತ್ತಾರೆ.ಮಹಜರ್ ನಲ್ಲಿ ಏನು ಬರೆದಿದೆ ಎಂದು ನನಗೆ ಓದಲು ಬರೆಯಲು ಬರದ ಕಾರಣ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ಘಟನೆ ವಿಚಾರವಾಗಿ ಪೊಲೀಸ್ ಠಾಣೆಗೆ ಹೋದಾಗ ಎಷ್ಟು ಸಹಿ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಮಹಜರ್ ಗೆ ನಾನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿ. ಸ್ಥಳ ನಕ್ಷೆ ಮಾಡಿದ್ದಕ್ಕೂ ನಾನು ಪೊಲೀಸ್

ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ಗೂಡ್ಸ್ ಆಟೋಗೆ ಡ್ಯಾಮೇಜ್ ಅದ ಬಗ್ಗೆ ಪೋಟೊಗಳಲ್ಲಿ ಕಾಣಿಸುತ್ತಿಲ್ಲ. ಚಾಮನಾಯಕರವರು ನಮಗೆ ಸಂಬಂಧಿಕರಾದ ಕಾರಣ ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡದಿದ್ದರೂ ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೆ ವಿಚಾರ ಗೊತ್ತಿಲ್ಲದಿದ್ದರೂ ಪೊಲೀಸರ ಹೇಳಿಕೆ ಮೇರೆಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮೃತನ ಸಂಬಂಧಿಕರಿಗೆ ವಿಮೆ ಪರಿಹಾರ ಸಿಗಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತ ಆರೋಪಿತನ ಅತಿವೇಗ ನಿರ್ಲಕ್ಷತನದಿಂದ ಆಗಿಲ್ಲ, ಮೃತ ಚಾಮನಾಯಕನ ನಿರ್ಲಕ್ಷತನದಿಂದೇ ಆಗಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.